***ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯಃ ಕೊಪ್ಪ***
***ಕ್ರಿಮಿನಲ್.ನಂ. 7/2019***

ಸಾಕ್ಷಿಯ ಹೆಸರುಃ ರಮ್ಯ

ಗಂಡನ ಹೆಸರುಃ ಅಶ್ರಫ್ ಪಿ ಡಬ್ಲ್ಯೂಃ1

ವಯಸ್ಸುಃ 26 ವರ್ಷ

ಉದ್ಯೋಗಃ ಗೃಹಿಣಿ

ವಾಸಃ ಬೇರುಕುಡಿಗೆ

ದಿನಾಂಕಃ 06-01-2020 ರಂದು ಪ್ರಮಾಣವಚನ ಬೋಧಿಸಲಾಯಿತು.

**ಃಃ ಮುಖ್ಯ ವಿಚಾರಣೆಃಃ 1 ರಿಂದ 3 ನೇ ಅರ್ಜಿದಾರರ ಪರ ಶ್ರೀಮತಿ ಆರ್ ಎನ್ ಬಿ ವಕೀಲರಿಂದಃ**

ಎದುರುದಾರರಾದ ಅಶ್ರಫ್ ನನ್ನ ಗಂಡ . ಹಾಗೆಯೇ ಎರಡು ಮತ್ತು ಮೂರನೇ ಅರ್ಜಿದಾರರಾದ ಕುಮಾರಿ ಆದ್ಯ ಮತ್ತು ಆದಿತ್ಯ ನನ್ನ ಮತ್ತು ಎದುರುದಾರರ ಮಕ್ಕಳಾಗಿರುತ್ತಾರೆ. ಎರಡು ಮತ್ತು ಮೂರನೇ ಅರ್ಜಿದಾರರು ಅಪ್ರಾಪ್ತರಾಗಿದ್ದು , ಈ ಪ್ರಕರಣವನ್ನು ನಾನು ಅವರುಗಳ ಪರವಾಗಿಯೂ ಮತ್ತು ನನ್ನ ಪರವಾಗಿಯೂ ಜೀವನಾಂಶವನ್ನು ಕೋರಿ ಹಾಕಿದ್ದು, ಅವರ ಪರವಾಗಿಯೂ ಈ ಸಾಕ್ಷಿಯನ್ನು ನುಡಿಯುತ್ತಿರುತ್ತೇನೆ.

ನನ್ನ ಮತ್ತು ಎದುರುದಾರರ ಮದುವೆ ದಿನಾಂಕಃ17/03/2013 ರಂದು ಸಣ್ಣಕೆರೆಯ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಸರಳವಾಗಿ ಆಗಿರುತ್ತದೆ. ಸದರಿ ಮದುವೆಗೆ ಎದುರುದಾರರ ತಂದೆ ತಾಯಿ ಮತ್ತು ಅವರ ಅಕ್ಕಪಕ್ಕದ ಮನೆಯವರು ಬಂದಿದ್ದು , ನಮ್ಮದು ಪ್ರೇಮ ವಿವಾಹವಾಗಿರುತ್ತದೆ.

ಮದುವೆಯಾದ ನಂತರ ಎದುರುದಾರರು ಹಿಂದೂ ಧರ್ಮಕ್ಕೆ ಮತಾಂತರಗೊಂಡು ಹಿಂದೂ ಧರ್ಮವನ್ನು ಅನುಸರಿಸುತ್ತಿರುತ್ತಾರೆ. ಮದುವೆಯಾದ ನಂತರ ನಾನು ಎದುರುದಾರರ ಮನೆಯಲ್ಲಿ ಅವರೊಟ್ಟಿಗೆ ವಾಸವಿದ್ದೆ. ಮದುವೆಯಾದ ನಂತರ ಸುಮಾರು 2 ವರ್ಷಗಳ ಕಾಲ ನನ್ನನ್ನು ಅವರು ಚೆನ್ನಾಗಿ ನೋಡಿಕೊಂಡಿದ್ದು , ನಮ್ಮ ದಾಂಪತ್ಯದ ಫಲವಾಗಿ ನಮಗೆ 2 ನೇ ಅರ್ಜಿದಾರರು ದಿನಾಂಕಃ16/01/2014 ರಂದು ಹುಟ್ಟಿದ್ದು , ಅದೇ ರೀತಿ 3 ನೇ ಅರ್ಜಿದಾರರು ದಿನಾಂಕಃ 11/08/2015 ರಂದು ಹುಟ್ಟಿರುತ್ತಾರೆ.

ಹಾಗೇ 2 ನೇ ಮಗು ಹುಟ್ಟಿದ ನಂತರ ನಾನು ಬೇರುಕುಡಿಗೆಯ ನನ್ನ ತಾಯಿಯ ಮನೆಗೆ ಬಾಣಂತನಕ್ಕೆಂದು ಹೋಗಿದ್ದು , ಆ ಸಮಯದಲ್ಲಿ ಎದುರುದಾರರು ಸಹ ನನ್ನ ತಾಯಿಯ ಮನೆಗೆ ಬಂದು ನಮ್ಮ ಜೊತೆಗೆ ವಾಸಿಸಲು ಪ್ರಾರಂಭಿಸಿರುತ್ತಾನೆ. ಹಾಗೇ ಒಂದು ತಿಂಗಳ ಕಾಲ ಎದುರುದಾರರು ನನ್ನ ಜೊತೆ ನನ್ನ ತಾಯಿಯ ಮನೆಯಲ್ಲಿ ಇದ್ದು , ಆ ಸಮಯದಲ್ಲಿ ಇದ್ದು , ವಿನಾಃ ಕಾರಣ ಜಗಳ ಮಾಡುವುದು , ಅವ್ಯಾಚ್ಯ ಶಬ್ದಗಳಿಂದ ಬೈಯುವುದು ಮಾಡಿ , ನನಗೆ ಹಿಂಸೆ ನೀಡುತ್ತಿದ್ದರು. ವಿನಾಃ ಕಾರಣ ನನ್ನ ಮೇಲೆ ಸಂಶಯವನ್ನು ಪಡುವುದು ಮತ್ತು ನಾನು ನನ್ನ ಸಂಬಂಧಿಕರ ಜೊತೆ ಮಾತನಾಡಿದರೂ ಸಹ ನನ್ನ ಮೇಲೆ ಅನುಮಾನಪಟ್ಟು ಇನ್ನೊಬ್ಬರ ಜೊತೆ ಸಂಬಂಧ ಇದೆ ಎನ್ನುವ ರೀತಿಯಲ್ಲಿ ಹೇಳುತ್ತಿದ್ದರು.

ಆ ನಂತರ ನನ್ನ ಜೊತೆ ಜಗಳ ಮಾಡಿ ನನ್ನನ್ನು ನನ್ನ ತಾಯಿಯ ಮನೆಯಲ್ಲಿಯೇ ಬಿಟ್ಟು ಹೋಗಿರುತ್ತಾನೆ. ನನ್ನನ್ನು ಕರೆದುಕೊಂಡು ಹೋಗುವ ಪ್ರಯತ್ನ ಮಾಡಿರುವುದಿಲ್ಲ.

ಎದುರುದಾರರು ಈಗ ಆತನ ತಂದೆ ತಾಯಿ ಮತ್ತು ಅಣ್ಣ ಅತ್ತಿಗೆಯ ಜೊತೆ ವಾಸವಿದ್ದು , ನಾನು ಅವರ ಮನೆಯಲ್ಲಿ ವಾಸವಿದ್ದಾಗ ಎದುರುದಾರರ ಅಣ್ಣನಾದ ಆಸಿಫ್ ವಿನಾಃ ಕಾರಣ ನನ್ನನ್ನು ಬೈಯುವುದನ್ನು ಸಹ ಮಾಡುತ್ತಿದ್ದ. ನಾನು ನನ್ನ ತಾಯಿಯ ಮನೆಗೆ ಬಂದ ನಂತರವೂ ಸಹ ಅಲ್ಲಿಗೆ ಎದುರುದಾರರು ಬಂದು ವಿನಾಃ ಕಾರಣ ಜಗಳ ಮಾಡಿ ಹೋಗುತ್ತಿದ್ದ . ಈ ಬಗ್ಗೆ ಅನೇಕ ಬಾರಿ ರಾಜೀ ಪಂಚಾಯ್ತಿಗಳು ನಡೆದರೂ ಸಹ ಎದುರುದಾರರು ತಮ್ಮ ತಪ್ಪನ್ನು ತಿದ್ದಿಕೊಂಡಿರುವುದಿಲ್ಲ. ವಿನಾಃ ಕಾರಣ

ಎದುರುದಾರರು ನನ್ನನ್ನು ಮತ್ತು ನನ್ನ ಮಕ್ಕಳನ್ನು ಯಾವುದೇ ಮೂಲಭೂತ ಅವಶ್ಯಕತೆಗಳನ್ನು ನೀಡದೇ ನಿರ್ಲಕ್ಷಿಸಿದ್ದು ನನ್ನ ತಾಯಿಯ ಮನೆಗೆ ಬಂದು ಗಲಾಟೆ ಮಾಡಿ ನನ್ನನ್ನು ಬಿಟ್ಟು ಹೋಗಿದ್ದು , ಆದಾದ ನಂತರ ನನ್ನನ್ನು ಮತ್ತು ನನ್ನ ಮಕ್ಕಳನ್ನು ನೋಡಿಕೊಂಡು ಹೋಗಲು ಬಂದಿರುವುದಿಲ್ಲ. ಎದುರುದಾರರ ಅಣ್ಣನ ಹೆಂಡತಿಗೆ ತುಂಬಾ ಖಾಯಿಲೆಯೂ ಸಹ ಇರುತ್ತದೆ.

ಅಶ್ರಫ್ ಗಾರೆಕೆಲಸವನ್ನು ಮಾಡುತ್ತಿದ್ದು , ಅದರಿಂದ ಆತನಿಗೆ ಪ್ರತೀ ತಿಂಗಳಿಗೆ 50,000/- ವರೆಗೂ ಮಾಸಿಕ ಆದಾಯವಿದ್ದು, ಆರ್ಥಿಕವಾಗಿ ತುಂಬಾ ಸಬಲನಾಗಿರುತ್ತಾನೆ. ನಾನು ಈಗ ನನ್ನ ತಾಯಿಯ ಮನೆಯಲ್ಲಿ ವಾಸಿಸುತ್ತಿದ್ದು , ಅವರೂ ಸಹ ಆರ್ಥಿಕವಾಗಿ ಸ್ಥಿತಿವಂತರಲ್ಲ. ನನ್ನ ಜೀವನ ನಿರ್ವಹಣೆಗೆ ಊಟ , ಬಟ್ಟೆ , ವಸತಿಯೆಂದು ಪ್ರತೀ ತಿಂಗಳಿಗೆ ರೂ.10,000/- ದವರೆಗೂ ಅವಶ್ಯಕತೆ ಇದ್ದು , ನನ್ನ ಇಬ್ಬರೂ ಮಕ್ಕಳಿಗೆ ಅವರ ವೈದ್ಯಕೀಯ ವೆಚ್ಚ , ಶಿಕ್ಷಣ , ಊಟ , ಬಟ್ಟೆ , ವಸತಿಯೆಂದು ಪ್ರತೀ ತಿಂಗಳಿಗೆ ತಲಾ ರೂ.5,000/- ದವರೆಗೂ ಅವಶ್ಯಕತೆ ಇರುತ್ತದೆ. ಎದುರುದಾರರು ಆರ್ಥಿಕವಾಗಿ ಸಬಲರಾಗಿದ್ದರೂ , ವಿನಾಃ ಕಾರಣ ನಮ್ಮನ್ನು ನೋಡಿಕೊಳ್ಳದೇ ನಿರ್ಲಕ್ಷಿಸಿದ್ದು , ಹಾಗಾಗಿ ಅವರಿಂದ ಜೀವನಾಂಶ ಕೊಡಿಸಬೇಕೆಂದು ಅವರಿಂದ ನನಗೆ ಪ್ರತೀ ತಿಂಗಳು ರೂ.10,000/- ಮತ್ತು ನನ್ನ ಮಕ್ಕಳಿಗೆ ತಲಾ ರೂ.5,000/- ದಂತೆ ಜೀವನಾಂಶವನ್ನು ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು , ಮುಂದೂಡಲಾಯಿತು.)

(ದಿನಾಂಕಃ06-01-2020 ರಂದು ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಓ.

ಸಹಿ/-
(ಕೆ.ಎಂ.ಗೌತಮ್)
ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.,
ಕೊಪ್ಪ .